ದಿನಾಂಕಃ 31-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಬಿ.ಎಸ್.ಕೆ. ವಕೀಲರಿಂದ:</u>

ನಾನು ಬೆಳಗಲಿ ಗ್ರಾಮದ ನಿವಾಸಿ. ನಮ್ಮ ಜಮೀನು ಮತ್ತು ಬೆಳಗಲಿ ಗ್ರಾಮದಲ್ಲಿ ಇರುತ್ತವೆ. ಮಹಾಲಿಂಗಪೂರದಲ್ಲಿ ನನಗೆ ಸೇರಿದ ಆಸ್ತಿಗಳು ಇರುತ್ತವೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯುವಾಗ ನನ್ನ ತಂದೆಯ ಹೆಸರು, ವಯಸ್ಸು ಹೇಳಿ ಬರೆಸಿರುತ್ತೇನೆ. ಸದರಿ ವಿಷಯವನ್ನು ನಾನು ವಕೀಲರಿಗೆ ಹೇಳಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಧ ನಿವೇಶನದ ಮೇಲೆ ವಾದಿ ಈ ಪ್ರಕರಣವನ್ನು ದಾಖಲು ಮಾಡಿರುತ್ತಾನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳನ್ನು ನೋಡಿರುತ್ತೇನೆ ಎಂದು ಹೇಳಿ ಬರೆಸಿರುತ್ತೇನೆ. ನಾನು ದಾವಾಆಸ್ತಿಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ನಂಬರ ಮತ್ತು ಅದರ ಕ್ಷೇತ್ರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮನೆ, ಪಶ್ಚಿಮಕ್ಕೆ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಮನೆ ಇದೆ . ಸದರಿ ಮನೆಗಳು ಯಾರಿಗೆ ಸೇರಿದ ಮನೆಗಳು ಎಂದು ನನಗೆ ಗೊತ್ತಿಲ್ಲ.

ನಿಪಿ-2 ರ ದಾಖಲೆ ಯಾವ ದಿನ ಆಗಿರುತ್ತದೆ ಎಂದು ಗೊತ್ತಿಲ್ಲ, ಆದರೆ 2018 ರಲ್ಲಿ ಆಗಿರುತ್ತದೆ. ನಿಪಿ-2 ರದಾಖಲೆಯಾದ ದಿನ ವಾದಿ ಪ್ರತಿವಾದಿಗೆ 5 ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ನೋಂದಣಿ ಕಛೇರಿಯಲ್ಲಿ ಕೊಟ್ಟಿರುತ್ತಾನೆ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಈ ಪ್ರಕರಣವನ್ನು ಪ್ರತಿವಾದಿಯ ವಿರುದ್ಧ ದಾಖಲು ಮಾಡಿರುತ್ತಾನೆ. ಪ್ರತಿವಾದಿ ತನ್ನ ಪ್ರಾಪಂಚಿಕ ಅಡಚಣೆ ಇರುವುದರಿಂದ ವಾದಿಯಿಂದ 1 ಲಕ್ಷ ರೂಪಾಯಿ ಸಾಲದ ರೂಪದಲ್ಲಿ 2014 ರಲ್ಲಿ ಪಡೆದಿದ್ದ ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ನಿಪಿ-2 ರ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ದಾಖಲೆಯಾದ ದಿನ ನಾನು, ಇನ್ನೊಬ್ಬ ಸಾಕ್ಷಿದಾರನಾದ ದುಂಡಪ್ಪ ಅಳ್ಳಿಮಟ್ಟಿ ವಾದಿ ಮತ್ತು ಪ್ರತಿವಾದಿ ಇದ್ದೆವು. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಹಾದೇವ ಮಲಬಾದಿ ಇದ್ದರು ಎಂದರೆ ಸರಿ. ನಿಪಿ-2 ಕ್ಕೆ ಸದರಿ ಮಹಾದೇವ ಮಲಬಾದಿ ಸಹಿ ಮಾಡಿರುತ್ತಾರೆ. ಸದರಿ ಮಹಾದೇವ ಮಲಬಾದಿ ಇವರ ಸಮಕ್ಷಮ

ಪ್ರತಿವಾದಿ ತಾನು ಪಡೆದ 1 ಲಕ್ಷ ರೂಪಾಯಿಗೆ ಬಡ್ಡಿ ಸೇರಿಸಿ 2019 ರಲ್ಲಿ ವಾದಿಗೆ ಮರುಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ವಾದಿಯು ನಿಪಿ-2 ರ ದಾಖಲೆಯನ್ನು ರದ್ದುಪಡಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ, ವಾದಿ ಮತ್ತು ಪ್ರತಿವಾದಿಯ ಮಧ್ಯೆ ತಕರಾರು ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಆ ಸಮಯದಲ್ಲಿ ನಮಗೆ ಬಂದು ಕೇಳಿದ್ದ ಎಂದರೆ ಸರಿ. ಆದರೂ ವಾದಿ ದಾಖಲೆಯನ್ನು ರದ್ದುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಈಗಾಗಲೇ ಸಾಲ ಮತ್ತು ಬಡ್ಡಿ ಮರುಪಾವತಿ ಮಾಡಿರುತ್ತಾನೆ, ಆದರೆ ಹೆಚ್ಚಿನ ಬಡ್ಡಿ ಹಣ ವಸೂಲಿ ಮಾಡುವ ಉದ್ದೇಶದಿಂದ ಕಾಗದ ರದ್ದುಪಡಿಸದೇ ಸುಳ್ಳು ಪ್ರಕರಣದಾಖಲು ಮಾಡಿರುತ್ತಾರೆ, ವಾದಿಯ ಹೇಳಿಕೆಯ ಮೇರೆಗೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ನಾನು ಮತ್ತು ದುಂಡಪ್ಪ ಅಳ್ಳಿಮಟ್ಟಿ ಗೆಳೆಯರು ಎಂದರೆ ಸಾಕ್ಷಿ ಮೊದಲಿನಿಂದಲೂ ಪರಿಚಯಸ್ಥರು ಎಂದು ಹೇಳುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡಲು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.10.31 16:29:49 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ